ತೀರ್ಮಾನವನ್ನು ಹುಡುಕಲೇಬೇಕಾಗುತ್ತದೆ. ಸದನದ ಸಮಿತಿ ರಚನೆ ಮಾಡಿದರೆ ಎರಡು ದಿವಸದಲ್ಲಿ ಈ ಕೆಲಸ ಆಗುವುದಿಲ್ಲ. ಆದ್ದರಿಂದ ನಾನು ಹೇಳುತ್ತಿದ್ದೇನೆ, ಎಲ್ಲಾ ದಾಖಲೆಗಳು ಅಲ್ಲಿಗೆ ಹೋಗಲಿ ಅದಕ್ಕೆ ಇಲಾಖೆ ವತಿಯಿಂದ ಹೋಗಬೇಕಾದ ಉತ್ತರವೂ ಹೋಗಲಿ. ಈ ಸದನ ಮುಗಿಯುವುದರೊಳಗೆ ಸಭಾಧ್ಯಕ್ಷರ ವಿವೇಚನೆಗೆ ಒಳಪಟ್ಟು ಒಂದು ತೀರ್ಮಾನ ತೆಗೆದುಕೊಳ್ಳುವ. ಇದಕ್ಕಿಂತ ಹೆಚ್ಚಾಗಿ ಇನ್ನೇನು ಮಾಡಬಹುದು, ಹೇಳಿ? ಅಧ್ಯಕ್ಷರ ತೀರ್ಮಾನಕ್ಕೆ ಸರ್ಕಾರ ತಯಾರಾಗಿದ್ದೇವೆಂದು ಹೇಳಿದಾಗಲೂ ನೀವು ಈ ತರಹ ಉತ್ತರ ಹೇಳುವುದಾದರೆ ಸದನವನ್ನು ನಡೆಸುವುದಕ್ಕೆ ಆಗುವುದಿಲ್ಲ.

ಶ್ರೀ ಕೆ.ವಿ. ಸದಾನಂದಗೌಡ : ಇಷ್ಟೆಲ್ಲ ದಾಖಲೆಗಳನ್ನು ಆಧರಿಸಿ ಅಂಕಿಅಂಶಗಳನ್ನು ಇಟ್ಟ ಮೇಲೂ ಕೂಡ ಸರ್ಕಾರ ಅದರ ಬಗ್ಗೆ ಕಣ್ಣುಮುಚ್ಚಾಲೆ ಆಡುತ್ತ ಅದನ್ನು ಮುಚ್ಚಿ ಹಾಕಬೇಕು, ಅದನ್ನು ಹಿಂದೆಹಾಕಬೇಕು ಮುಂದೆ ಹಾಕಬೇಕು ಎಂಬ ಪ್ರವೃತ್ತಿ ಮಾಡುವುದಿದ್ದರೆ ನಾವು ಧರಣ ಮಾಡುತ್ತೇವೆ.

(ಗೊಂದಲ)

(ಭಾಜಪ ಸದಸ್ಯರು ಧರಣಿ ಮಾಡುವರು)

ಶ್ರೀ ಎಂ.ಸಿ. ನಾಣಯ್ಯ : ಅಧ್ಯಕ್ಷರೇ 120 ಕೋಟಿ ಅಲ್ಲ 500 ಕೋಟಿ ಹಗರಣವೆಂದು ಅವರು ಹೇಳಿ, ಸರ್ಕಾರ ಮಾತ್ರ ಯಾವುದನ್ನೂ ಮುಚ್ಚಿಡಲು ತಯಾರಾಗಿಲ್ಲ. ನೇರವಾಗಿ ಹೇಳುತ್ತಿದ್ದೇವೆ ಆದ್ದರಿಂದ ಪೂರ್ವಭಾವಿಯಾಗಿ... ಅಧ್ಯಕ್ಷರ ಮೇಲೂ ವಿಶ್ವಾಸ ಇಲ್ಲ, ಮುಖ್ಯಮಂತ್ರಿಗಳ ಮೇಲೂ ವಿಶ್ವಾಸ ಇಲ್ಲ.... ರಾಜಕಾರಣ ಮಾಡುವುದಕ್ಕೆ ಹೋಗಬಹುದು ಆದರೆ ಸರ್ಕಾರದ ವತಿಯಿಂದ ಉತ್ತರ ಬಂದಾದಮೇಲೂ ತಾವು ಈ ತರಹ ಮಾಡುತ್ತಿರುವುದು ಸರಿಯಲ್ಲ. ಸದನದ ಸಮಿತಿಗಾಗಿ ತಾವು ಅಧ್ಯಕ್ಷರ ಕೊಠಡಿಯಲ್ಲಿ ಚರ್ಚೆಮಾಡಿ. ನೀವು ಹೇಳಿರುವ ದಾಖಲೆಗಳಿಗೆ ಉತ್ತರ ಬರಲಿ ಇಲಾಖೆಯಿಂದ, ಆಮೇಲೆ ಸದನದ ಸಮಿತಿ ಆಗಬೇಕೆಂದರೆ ಸರ್ಕಾರ ತಯಾರಾಗಿದ್ದೇವೆ. ಇದಕ್ಕೂ ನೀವು ತಯಾರಾಗಿಲ್ಲವೆಂದರೆ ಬಹುಶಃ ಇದರಲ್ಲಿ ಬೇರೆ ತರಹದ ವಿಚಾರ ನಿಮ್ಮ ಮನಸಿನಲ್ಲಿದೆ.

(ಗೊಂದಲ)

(ಮಾನ್ಯ ಶ್ರೀ ರಮೇಶಕುಮಾರರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಎ. ರಾಮದಾಸ್ : ಯಾವ ವಿಚಾರವನ್ನೂ ಮುಚ್ಚಿಡಲಾರದೆಂಬ ಸರ್ಕಾರದ ಅಭಿಪ್ರಾಯವನ್ನು ನಾವೂ ಸ್ವಾಗತ ಮಾಡುತ್ತೇವೆ. ಆದರೆ ಇವತ್ತು ಇದನ್ನು ಸರ್ಕಾರದ ಗಮನಕ್ಕೆ ನಾನು ತರುತ್ತಿಲ್ಲ. 5-10-1995ರಲ್ಲಿ ದಾಖಲೆ ಸಮೇತ ಮುಖ್ಯಮಂತ್ರಿಗಳಿಗೆ ಪತ್ರ ಬರೆದು ಎಲ್ಲ ದಾಖಲೆಗಳನ್ನು ಕೊಟ್ಟಿದ್ದೇನೆ. ಅವತ್ತಿನಿಂದ ಇವತ್ತಿನವರೆಗೆ ಸರ್ಕಾರ ಏನು ಮಾಡುತ್ತಿತ್ತು? ಅದನ್ನು ನಾನು ಪ್ರಶ್ನಿಸುತ್ತಿರುವುದು.

ಶ್ರೀ ಅರಗ ಜ್ಞಾನೇಂದ್ರ : ಸ್ವಾಮಿ ಅಂಗೈ ಹುಣ್ಣಿಗೆ ಕನ್ನಡಿಯ ಅವಶ್ಯಕತೆ ಇಲ್ಲ. ಇಲ್ಲಿ ವಿಷಯ ಇಟ್ಟಿದ್ದೇವೆ, ದಾಖಲೆ ಸಹಿತ ಎರಡು ಉದಾಹರಣೆಗಳನ್ನು ಹೇಳಿದ್ದೇವೆ. ಮುಂದೆ ಅಧ್ಯಕ್ಷರ ಎದುರಿಗೆ ಆರ್ಗುಮೆಂಟಾಗಲಿ, ಮುಂದೆ ಹಾಕುವುದು ಹಿಂದಕ್ಕೆ ಹಾಕುವುದು ನಾಳೆಗೆ ಹಾಕುವುದು, ಏಕೆ?

(ಗೊಂದಲ)